**ದಿನಾಂಕಃ 06.11.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಂ ಎನ್  ವಕೀಲರಿಂದಃ-**

ನಿಪಿ-1 ರ ಪ್ರಕಾರ ಆಸ್ತಿಯನ್ನು ನನ್ನ ಪತಿಯವರು ಅವರ ತಂದೆಯಿಂದ ಖರೀದಿಸಿರುತ್ತಾರೆ ಅದರ ವಿಸ್ತಿರ್ಣ ಪೂರ್ವ ಪಶ್ಚಿಮ 20 ಮತ್ತು ಉತ್ತರ ದಕ್ಷಿಣ 30 ಅಡಿಗಳು. ನಿಪಿ-1 ರಲ್ಲಿರುವ ಚಕ್ಕುಬಂದಿಯನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-1 ರಲ್ಲಿ ಬರೆದಿರುವ ಚಕ್ಕುಬಂದಿ ಪೂರ್ವಕ್ಕೆ ಃ ಜಡೇತಿಮ್ಮಣ್ಣನವರ ಹಿತ್ತಲು, ಪಶ್ಚಿಮಕ್ಕೆ ಃ ನಾಗರಾಜಪ್ಪ ರವರ ನಿವೇಶನ, ದಕ್ಷಿಣಕ್ಕೆ ಃ ಹುಚ್ಚಣ್ಣನ ಮನೆ ಮತ್ತು ಹಿತ್ತಲು, ಉತ್ತರಕ್ಕೆ ಃ ಮುನ್ಸಿಪಲ್ ರಸ್ತೆ  ಇರುವ ಆಸ್ತಿಯನ್ನು ನಾವು ಕ್ರಯಕ್ಕೆ ಪಡೆದಿರುತ್ತೇವೆ. ನಿಪಿ-1 ರಲ್ಲಿ ಇರುವ ಚಕ್ಕುಬಂದಿಯನ್ನು ನಮೂದಿಸಿ ದಾವೆ ಹೂಡಿರುತ್ತೇವೆ ಎಂದರೆ ಸರಿ. ನಿಪಿ-1 ರಲ್ಲಿರುವ ಚಕ್ಕುಬಂದಿ ಮಾಹಿತಿಯನ್ನು ನಾನು ನನ್ನ ವಕೀಲರಿಗೆ ನೀಡಿರುತ್ತೇನೆ. ನನಗೆ ದಾವಾ ಆಸ್ತಿಯು ನನ್ನ ಗಂಡನಿಂದ ದಾನಪತ್ರದ ಮೂಲಕ ಬಂದಿರುತ್ತದೆ. ಸದರಿ ದಾನಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ-3 ರಲ್ಲಿರುವ ಚಕ್ಕುಬಂದಿಗೂ ನಿಪಿ-1 ರಲ್ಲಿರುವ ಚಕ್ಕುಬಂದಿಗೂ ವ್ಯತ್ಯಾಸ ಇದೆ ಎಂದರೆ ಸರಿ. ನಿಪಿ-3 ರಲ್ಲಿ ಚಕ್ಕುಬಂದಿ ಪೂರ್ವಕ್ಕೆ ಃ ರತ್ನಮ್ಮ ಕೋಂ ಜಗತ್ ತಿಮ್ಮಣ್ಣರವರ ಸ್ವತ್ತು, ಪಶ್ಚಿಮಕ್ಕೆ ಃ ವೇದಾವತಿಯವರ ಸ್ವತ್ತು, ಉತ್ತರಕ್ಕೆ ಃ ಎಮ್ಮೆದೊಡ್ಡಿ ರಸ್ತೆ, ದಕ್ಷಿಣಕ್ಕೆ ಃ ಖಾಸಗಿ ಸ್ವತ್ತು ಎಂದು ನಮೂದು ಇದೆ ಎಂದರೆ ಸರಿ. ಸದರಿ ವ್ಯತ್ಯಾಸವನ್ನು ಸರಿಪಡಿಸಲು ಪುರಸಭೆಗೆ ಹಲವಾರು ಬಾರಿ ಅರ್ಜಿಯನ್ನು ನೀಡಿರುತ್ತೇನೆ. ಸದರಿ ಅರ್ಜಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿ ಸದರಿ ಅರ್ಜಿಗಳು ಇರುವುದಿಲ್ಲ ಎಂದು ನುಡಿಯುತ್ತಾರೆ.

ಚಕ್ಕುಬಂದಿ ವ್ಯತ್ಯಾಸವನ್ನು ಸರಿಪಡಿಸಲು ಅರ್ಜಿಯನ್ನು ನೀಡಿರುವ ಬಗ್ಗೆ ನನ್ನ ವಾದ ಪತ್ರದಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಾಗಲೀ ತಿಳಿಸಿರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಕೇಳಿರುವ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳಲ್ಲಿ ನನಗೆ ಹಕ್ಕು ಅಧಿಕಾರ ಸ್ವಾದೀನ ಇಲ್ಲಾ ಎಂದರೆ ಸರಿ. ನಿಪಿ-1 ರಲ್ಲಿರುವ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಅದು ಖಾಲಿ ನಿವೇಶನವಾಗಿತ್ತು ಎಂದರೆ ಸರಿ. ನಿಪಿ-1 ರಲ್ಲಿರುವ ಖರೀದಿಸಿದ ಆಸ್ತಿಯಲ್ಲಿ ಅದೇ ವರ್ಷದಲ್ಲಿ ಮನೆಯನ್ನು ಕಟ್ಟಿರುತ್ತೇವೆ. ಮನೆ ನಿರ್ಮಿಸುವಾಗ ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪಡೆದಿರುತ್ತೇನೆ ಹಾಗೂ ಪುರಸಭೆಯಿಂದ ಸಾಲವನ್ನು ಪಡೆದಿರುತ್ತೇನೆ. ನಾನು ಕಟ್ಟಡ ನಿರ್ಮಾಣ ಪರವಾನಗಿ, ನಕ್ಷೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಮುಂದೆ ಹಾಜರುಪಡಿಸುತ್ತೇನೆ. 20 x 30 ನಿವೇಶನದಲ್ಲಿ ನಾನು 20 x 20 ಅಡಿಗಳಲ್ಲಿ ಮನೆ ಕಟ್ಟಿರುತ್ತೇನೆ. ಪರವಾನಗಿಯನ್ನೂ ಸಹ 20 x 20 ಅಡಿಗಳಿಗೆ ಪಡೆದಿರುತ್ತೇನೆ. ನಿಪಿ-3 ರಲ್ಲಿ 20 x 30 ಅಡಿಗಳಲ್ಲಿ ಮನೆ ಇದೆ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ-3 ರಲ್ಲಿ 20 x 30 ಅಡಿ ಮನೆ ಇದೆ ಎಂದು ನಮೂದು ಇದ್ದು ಅದಕ್ಕೆ ಕಂದಾಯ

ಪಾವತಿಸುತ್ತಿದ್ದೇವೆ ಎಂದರೆ ಸಾಕ್ಷಿಯು ಮನೆಯು 20 x 20 ಅಡಿಗಳಲ್ಲಿ ಇದ್ದು ಕಂದಾಯವನ್ನು 20 x 30 ಅಡಿ ವಿಸ್ತೀರ್ಣಕ್ಕೆ ಪಾವತಿಸುತ್ತಿದ್ದೇವೆ ಎಂದು ನುಡಿಯುತ್ತಾರೆ. ಪುರಸಭೆಯವರು 20 x 30 ಅಡಿಗೆ ಕಂದಾಯವನ್ನು ತೆಗೆದುಕೊಳ್ಳುತ್ತಿರುವ ಬಗ್ಗೆ ಯಾವತ್ತೂ ಸಹ ನಾನು ಪುರಸಭೆಯವರನ್ನು ಪ್ರಶ್ನಿಸಿರುವುದಿಲ್ಲ. ದಾವೆಯಲ್ಲಿ 20 x 30 ಅಡಿ ವಿಸ್ತೀರ್ಣದಲ್ಲಿ ಮನೆ ಇದೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು 20 x 20 ಅಡಿ ವಿಸ್ತೀರ್ಣದಲ್ಲಿ ಮನೆ ನಿರ್ಮಿಸಿದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ನಾನು ವಾದಪತ್ರದಲ್ಲಿ ನಮೂದಿಸಿರುವ ಎ, ಬಿ, ಸಿ ಷೆಡ್ಯೂಲ್ ಆಸ್ತಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಬಿ ಷೆಡ್ಯೂಲ್ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ : ಜಡೇತಿಮ್ಮಣ್ಣನವರ ಹಿತ್ತಲು, ಪಶ್ಚಿಮಕ್ಕೆ : ವೇದಾವತಿಯವರ ಮನೆ, ಉತ್ತರಕ್ಕೆ : ಮುನ್ಸಿಪಲ್ ರಸ್ತೆ, ದಕ್ಷಿಣಕ್ಕೆ : ಕನ್ಸರ್ವೆನ್ಸಿ ರಸ್ತೆ. ಸಿ ಷೆಡ್ಯೂಲ್ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ : ಜಡೇತಿಮ್ಮಣ್ಣನವರ ಹಿತ್ತಲು, ಪಶ್ಚಿಮಕ್ಕೆ : ವೇದಾವತಿಯವರ ಮನೆ, ಉತ್ತರಕ್ಕೆ : ಮುನ್ಸಿಪಲ್ ರಸ್ತೆ, ದಕ್ಷಿಣಕ್ಕೆ : ಕನ್ಸರ್ವೆನ್ಸಿ ರಸ್ತೆ. ಈ ಮೇಲೆ ಹೇಳಿದ ಚಕ್ಕುಬಂದಿ ಅಸ್ತಿತ್ವದಲ್ಲಿರುವ ಬಗ್ಗೆ ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಬಿ ಮತ್ತು ಸಿ ಷೆಡ್ಯೂಲ್ ಆಸ್ತಿಗಳು ಅಸ್ತಿತ್ವದಲ್ಲಿಲ್ಲ ಹಾಗೂ ಯಾವುದೇ ದಾಖಲಾತಿಗಳು ಇಲ್ಲಾ ಎಂದರೆ ಸರಿಯಲ್ಲ. ಬಿ ಮತ್ತು ಸಿ ಷೆಡ್ಯೂಲ್ ಆಸ್ತಿಯ ವಿಸ್ತೀರ್ಣ 20 x 10 ಅಡಿಗಳು. ನಿಪಿ-1 ರಲ್ಲಿರುವ 20 x 30 ಅಡಿ ನಿವೇಶನದಲ್ಲಿ ಪ್ರತಿವಾದಿಗಳು ಸ್ವಾದೀನ ಇಲ್ಲಾ ಎಂದರೆ ಸರಿಯಲ್ಲ. ಸುಮಾರು 3 ವರ್ಷಗಳಿಂದ ಸುಮಾರು 10 x 10 ಅಡಿಗಳ ವಿಸ್ತೀರ್ಣದಲ್ಲಿ ಪ್ರತಿವಾದಿಗಳು ಸ್ವಾದೀನ ಇರುತ್ತಾರೆ. ಆಸ್ತಿಯನ್ನು ಖರೀದಿಸಿದ ನಂತರ ಸುತ್ತಲೂ ಬೇಲಿ ಹಾಕಿರುತ್ತೇನೆ. ಈಗಲೂ ಬೇಲಿ ಇದೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ತಾಯಿ ನನ್ನ ಗಂಡನ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆ ಈಗಲೂ ಚಾಲ್ತಿಯಲ್ಲಿದೆ. ಸದರಿ ದಾವೆಯಲ್ಲಿ ನಾನು ಹಾಜರಾಗಿ ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ತಕರಾರಿನಲ್ಲಿ ಈ ದಾವೆಯ ವಿಚಾರವನ್ನು ನಮೂದಿಸಿರುತ್ತೇನೆ. 1 ನೇ ಪ್ರತಿವಾದಿ ತಾಯಿ ದಾವೆ ಹೂಡಿದ ನಂತರ ಈ ದಾವೆಯನ್ನು ನಾನು ಹಾಕಿರುತ್ತೇನೆ ಎಂದರೆ ಸರಿ. ದಾವೆ ಹೂಡುವ ಸಮಯದಲ್ಲಿ ದಾವಾ ಆಸಿಯ ಮೌಲ್ಯ ಎಷ್ಟಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಸುಮಾರು ರೂ. 8.00 ಲಕ್ಷ ಬೆಲೆ ಬಾಳಬಹುದು ಎಂದು ನುಡಿಯುತ್ತಾರೆ. ನಮ್ಮ ಮನೆಯ ದಕ್ಷಿಣ ದಿಕ್ಕಿಗೆ ಚರಂಡಿ ಇದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನೀರು ಹೋಗುವ ಸಲುವಾಗಿ ನಾವೇ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಚರಂಡಿ ಒಂದು ಅಡಿ ಅಗಲವಿದ್ದು ಆ ಸಾಲಿನಲ್ಲಿರುವ ಎಲ್ಲಾ ಮನೆಯವರು ಸದರಿ ಪೈಪನ್ನು ಹಾಕಿಕೊಂಡು ಮುಂದುವರೆಸಿಕೊಂಡು ಹೋಗಿರುತ್ತಾರೆ.

ನಮ್ಮ ಮನೆಯ ದಕ್ಷಿಣ ಭಾಗದ ಗೋಡೆಯ ನೇರವಾಗಿ ಬೇರೆಯವರು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಎ ಷೆಡ್ಯೂಲ್ ಆಸ್ತಿಯ ದಕ್ಷಿಣಕ್ಕೆ ನಮ್ಮ ಖಾಲಿ ಜಾಗ ತದನಂತರ ಓಣಿ, ಆನಂತರ ಪ್ರತಿವಾದಿಯ ಮನೆ ಇರುತ್ತದೆ. ನಾನು ಈಗ ಹೇಳಿರುವಂತೆ ನಾನು ದಾವಾ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಮನೆ ನಂತರ ಜಾಗ ಇದ್ದು ನಂತರ ಮುನ್ಸಿಪಲ್ ಓಣಿ ಬರುತ್ತದೆ ಎಂದು ನುಡಿಯುತ್ತಾರೆ. ನಿಪಿ-1 ರ ದಕ್ಷಿಣ ಭಾಗದ ಚಕ್ಕುಬಂದಿಯಲ್ಲಿ ಹುಚ್ಚಣ್ಣನವರ ಮನೆ ಎಂದು ನಮೂದು ಇದ್ದು ಅಲ್ಲಿ ಯಾವುದೇ ಓಣಿ ಇಲ್ಲಾ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಆಸ್ತಿಯ ಚಕ್ಕುಬಂದಿಯಂತೆ ನಾನು ಸ್ವಾದೀನ ಇಲ್ಲಾ ಎಂದರೆ ಸರಿಯಲ್ಲ. ನೀವು ದಾವಾ ಎ ಷೆಡ್ಯೂಲ್ ಸ್ವತ್ತಿನ ಚಕ್ಕುಬಂದಿಯಲ್ಲಿ ಸ್ವಾದೀನ ಇದ್ದಿರೋ ಅಥವಾ ನಿಪಿ-1 ರ ಚಕ್ಕುಬಂದಿಯಲ್ಲಿ ಸ್ವಾದೀನ ಇದ್ದಿರೋ ಎಂಬ ಪ್ರಶ್ನೆಗೆ ಸಾಕ್ಷಿಯು ಎರಡೂ ಆಸ್ತಿಗಳು ಒಂದೇ ಎಂದು ನುಡಿಯುತ್ತಾರೆ. ನಿಪಿ-3 ರ ದಕ್ಷಿಣ ದಿಕ್ಕಿಗೆ ಯಾವುದೇ ಓಣಿ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅದು ತಪ್ಪಾಗಿ ನಮೂದು ಇದ್ದು ಅದನ್ನು ತಿದ್ದುಪಡಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ನಿಪಿ-1 ರ ದಕ್ಷಿಣ ದಿಕ್ಕಿಗೆ ಓಣಿ ಎಂದು ನಮೂದಾಗಿಲ್ಲ ಎಂದರೆ ಸಾಕ್ಷಿಯು ಅದರಲ್ಲೂ ತಪ್ಪು ಆಗಿದೆ ಎಂದು ನುಡಿಯುತ್ತಾರೆ.

ನನ್ನ ಗಂಡನವರು ಮಾಡಿರುವ ದಾನಪತ್ರದಲ್ಲಿ ದಕ್ಷಿಣ ದಿಕ್ಕಿಗೆ ಓಣಿ ಎಂದು ನಮೂದು ಮಾಡಿರುತ್ತಾರೆ. ದಕ್ಷಿಣ ಭಾಗದ ಚಕ್ಕುಬಂದಿ ತಪ್ಪಾಗಿರುವ ಬಗ್ಗೆ ನನ್ನ ಪ್ರಮಾಣಪತ್ರದಲ್ಲಿ ಮತ್ತು ವಾದ ಪತ್ರದಲ್ಲಿ ಹೇಳಿರುತ್ತೇನೆ. ನಿಪಿ-1 ರ ದಕ್ಷಿಣ ಭಾಗದಲ್ಲಿರುವ ಚಕ್ಕುಬಂದಿ ತಪ್ಪಾಗಿ ನಮೂದು ಇರುವುದನ್ನು ಸರಿಪಡಿಸಲು ತಿದ್ದುಪಡಿ ಪತ್ರ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಮಾರಾಟಗಾರರು ಮರಣಹೊಂದಿರುವ ಕಾರಣ ತಿದ್ದುಪಡಿಪತ್ರ ಮಾಡಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ನನ್ನ ಗಂಡನವರು ಮಾಡಿರುವ ದಾನಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲಾ ಎಂದರೆ ಸರಿ. ದಾನಪತ್ರದ ಮೂಲಕ ನನಗೆ ಖಾತೆ ಬಂದಿರುತ್ತದೆ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.